ಈಗಾಗಲೇ ಡಾಂಬರು ಮಾಡಲಾಗಿದೆ. ಇನ್ನೊಂದು ಕಿಮೀ ಉದ್ದದ ರಸ್ತೆಗೆ ಡಾಂಬರ್ ಮಾಡುವ ಕೆಲಸ ಪ್ರಗತಿಯಲ್ಲಿದೆ. ಮುಂದೆ ರಾಯಚೂರು ಜಿಲ್ಲೆಯಲ್ಲಿ ಬರುವಂತಹ ಈ ರಸ್ತೆಯ ಒಟ್ಟು ಉದ್ದ ೬೬ ಕಿ.ಮೀ.ಗಳಿಗೆ ಈಗಾಗಲೇ ಡಾಂಬರು ಮಾಡಲಾಗಿದೆ. ಅಂತೆಯೇ ಡಾಂಬರು ಮಾಡಲು ಉಳಿದಿರುವ ಭಾಗ ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಕೃಷಿ ಸಹಾಯಕ ಹುದ್ದೆಗಳು

೨೧೭೬. ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ಕೃಷಿ ಸಹಾಯಕರ ಹುದ್ದೆಗಳು ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು).

ಆ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೬೯ ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇವೆ ತಾಲ್ಲೂಕುವಾರು ವಿವರಗಳು ಈ ರೀತಿ ಇದೆ.

೧	ಮಂಗಳೂರು	೧೫
೨	ಉಡುಪಿ	೪೧
೩	ಕುಂದಾಪುರ	೨೭
೪	ಕಾರ್ಕಳ	೨೪
೫	ಬಂಟ್ವಾಳ	೨೦
೬	ಬೆಳ್ತಂಗಡಿ	೧೦
೭	ಪುತ್ತೂರು	೨೧
೮	ಸೂಳ್ಯ	೧೧
	ಒಟ್ಟು	೧೬೯

ಆ) ಈಗಾಗಲೇ ಕೃಷಿ ಇಲಾಖೆಯು ಕೃಷಿ ಸಹಾಯಕರ ಹುದ್ದೆಗೆ ಆಯ್ಕೆ ಮಾಡಿದ ೧೦೫೦ ಅಭ್ಯರ್ಥಿಗಳಲ್ಲಿ ಮುಂದು ಎರ್ಪಡಿಸಲಾಗಿರುವ ಸೇವಾ ಪೂರ್ವ ಕೃಷಿ ಸಹಾಯಕರ ಸಂಸ್ಥೆ ತರಬೇತಿಯನ್ನು ಹೊಂದುತ್ತಿದ್ದಾರೆ. ತರಬೇತಿಯು ಇನ್ನು ೩ ತಿಂಗಳಲ್ಲಿ ಮುಗಿಯುವುದರಿಂದ ನಂತರ ತರಬೇತಿ ಪಡೆದ ಅಭ್ಯರ್ಥಿಗಳನ್ನು ಖಾಲಿ ಇರುವ ಹುದ್ದೆಗಳಲ್ಲಿ ಮುತ್ತೊಂದು ವರ್ಷದ ವೃತ್ತಿ ತರಬೇತಿಗೆ ನೇಮಿಸುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಕೃಷಿ ಸಹಾಯಕರ ಹುದ್ದೆಗಳನ್ನು ಹೆಚ್ಚಿನ ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಶಾರೀರಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳು

೨೧೧೦ ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ ನಿರ್ದೇಶಕರ ಹುದ್ದೆಗಳು ಪ್ರಸಕ್ತ ಭರ್ತಿಯಾಗದೆ ಉಳಿದಿರುವ ಸಂಖ್ಯೆ ಎಷ್ಟು ?

ಆ) ತರಬೇತಿ ಪಡೆದ ಶಾರೀರಿಕ ಶಿಕ್ಷಣ ನಿರ್ದೇಶಕರು ಎಷ್ಟೋ ಮಂದಿ ನಿರುದ್ಯೋಗಿಗಳಾಗಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ತರಬೇತಿ ಹೊಂದಿದ ಶಾರೀರಿಕ ಶಿಕ್ಷಣ ನಿರ್ದೇಶಕರನ್ನು ಸರ್ಕಾರವು ಪ್ರಸಕ್ತ ಖಾಲಿ ಸರ್ಕಾರಿ ಪ್ರೌಢ ಶಾಲೆಗಳಿಗೆ ಈ ಶಾಲೆಯಲ್ಲಿ ಸಂದರ್ಶನ ನಡೆಸಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳುವರೇ ?

(ಈ ಪ್ರಶ್ನೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಉತ್ತರ ನೀಡುವರು)

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಪ್ರೌಢ ಶಾಲೆಗಳಲ್ಲಿ ೧೪೨.

ಆ) ಬಂದಿಲ್ಲ.

ಇ) ಕ್ರಮ ತೆಗೆದುಕೊಳ್ಳಲಾಗುವುದು.

ದ. ಕ. ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು.

೨೧೦೬. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. (ವಿವರಗಳನ್ನು ನೀಡುವುದು)

ಆ) ಖಾಲಿ ಹುದ್ದೆಗಳನ್ನು ಎಷ್ಟು ಸಮಯದೊಳಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ?

ಇ) ಈ ಹುದ್ದೆಗಳು ಎಷ್ಟೋ ಸಮಯದಿಂದ ಖಾಲಿ ಇರುವುದರಿಂದ ಪ್ರಾಥಮಿಕ ಶಿಕ್ಷಣವನ್ನು ಕುಸಿಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು) —

ಅ) ೧೫೦. (ವಿವರಗಳನ್ನು ಪ್ರತ್ಯೇಕವಾಗಿ ಸದಸ್ಯರಿಗೆ ಒದಗಿಸಲಾಗುವುದು)

ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳ ಸಂದರ್ಶನಗಳನ್ನು ಕೂಡಲೇ ನಡೆಸಿ ನೇರ ನೇಮಕಾತಿ ಮೂಲಕ ತುಂಬಲು ಜಿಲ್ಲಾ ಆಯ್ಕೆ ಸಮಿತಿಗಳಿಗೆ ನಿರ್ದೇಶನ ನೀಡಲಾಗಿದೆ.

ಇ) ಶಿಕ್ಷಕರ ಕೊರತೆ ಪೂರೈಸಲು ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಅಗತ್ಯವಿರುವ ಶಾಲೆಗಳಿಗೆ ಶಿಕ್ಷಕರನ್ನು ಸ್ಥಳಾಂತರಿಸುವ ಅಥವಾ ನಿಯೋಜಿಸುವ ಮೂಲಕ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗಿದೆ.

ಅಡಿಕೆ ಬೆಲೆ ಕುಸಿತ

೨೨೭೪. ಶ್ರೀ ಜಿ. ಎಸ್. ಆಚಾರ್ (ಬೈಂದೂರು). — ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಡಿಕೆ ಬೆಲೆ ಕುಸಿತದಿಂದಾಗಿ ರೈತರು ಕಂಗೆಟ್ಟ ಸಂದರ್ಭದಲ್ಲಿ ಕಳೆದ ವರ್ಷ ಸರ್ಕಾರ ನೀಡಿದ ಆಶ್ವಾಸನೆಗಳಲ್ಲಿ ಕಾರ್ಯಗತವಾಗಿರುವುದೆಷ್ಟು ?

ಆ) ಹಾಗಿಲ್ಲದಿದ್ದಲ್ಲಿ, ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು) —

ಅ) ಒಂದು.

ಆ) ಅಡಿಕೆ ಬೆಳೆಯು ಬೆಲೆ ಕುಸಿತ ಹಾಗೂ ಅಡಿಕೆ ಬೆಳೆಗಾರರ ತೊಂದರೆಗಳ ಬಗ್ಗೆ ಅಧ್ಯಯನ ಮಾಡಲು ಮತ್ತು ಪರಿಹಾರ ಸೂಚಿಸಲು ಸರ್ಕಾರಿಂದ ಆದೇಶ ಸಂಖ್ಯೆ ಎಪಿಟಿ ೧೫೬ ಪಿಹೆಚ್‌ಜಿ ೮೭